ಸಾಹಿತ್ಯ ಹಾಗೂ ಆದಿವಾಸಿಗಳು – ಎರಡರ ಸಖ್ಯಕ್ಕೂ ಮಹಾಶ್ವೇತಾ ಬಾಲ್ಯದಲ್ಲೇ ಒಳಗಾದರು. ಅವರು ಜನಿಸಿದ್ದು ಅವಿಭಜಿತ ಭಾರತದಲ್ಲಿ; ಪ್ರಸ್ತುತ ಬಾಂಗ್ಲಾದ ರಾಜಧಾನಿ ಆಗಿರುವ ಇಂದಿನ ಢಾಕಾದಲ್ಲಿ. ಬಾಲ್ಯದಿಂದಲೇ ಸಾಮಾಜಿಕ ಚಟುವಟಿಕೆಗಳ ಬಗ್ಗೆ ಅವರಿಗೆ ತೀವ್ರ ಆಸಕ್ತಿಯಿತ್ತು. ಬಂಗಾಲದಲ್ಲಿ ತೀವ್ರ ಬರಗಾಲ ಇದ್ದಾಗ ಹದಿನೇಳರ ಮಹಾಶ್ವೇತಾ ಪರಿಹಾರ ಕಾರ್ಯಗಳಲ್ಲಿ ಸಕ್ರಿಯರಾಗಿದ್ದರಂತೆ. ಅವರ ಅಜ್ಜಿ (ಅಮ್ಮನ ಅಮ್ಮ) ಹೆಣ್ಣುಮಕ್ಕಳ ಸಾಕ್ಷರತೆಗಾಗಿ ದುಡಿದವರು. ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಇರುವ ಶಾಲೆಗಳಿಂದ ಹೊರಗುಳಿದ ಹೆಣ್ಣುಮಕ್ಕಳನ್ನು ಕಲೆಹಾಕಿಕೊಂಡು ಮನೆಯನ್ನೇ ಶಾಲೆಯನ್ನಾಗಿ ಅವರು ಪರಿವರ್ತಿಸಿದ್ದರು. ಮಹಾಶ್ವೇತಾ ಅವರ ಅಜ್ಜ ಕೂಡ ಸಾಮಾನ್ಯದವರಲ್ಲ. ಅವರೊಬ್ಬ ವಕೀಲರು. ಢಾಕಾದಲ್ಲಿನ ಜಮೀನ್ದಾರರಿಂದ ಶೋಷಣೆಗೊಳಗಾದ ಬಡಬಗ್ಗರ ಪರವಾಗಿ ದಾವೆ ನಡೆಸುತ್ತಿದ್ದ ಅವರು ತಮ್ಮ ಕಕ್ಷಿದಾರರಿಂದ ಶುಲ್ಕವನ್ನೇನೂ ನಿರೀಕ್ಷಿಸುವಂತಿರಲಿಲ್ಲ. ದುರ್ಬಲ ವರ್ಗದವರ ಪರವಾದ ಈ ವಕ್ತಾರಿಕೆ ಅಜ್ಜನಿಂದ ಮೊಮ್ಮಗಳಿಗೆ ಬಂದಿರಬೇಕು.

ಮಹಾಶ್ವೇತಾ ಅವರ ತಂದೆ ಮನಿಷ್ ಘಟಕ್. ತಾಯಿ ಧರಿತ್ರೀದೇವಿ. ಅಪ್ಪ ಹೆಸರಾಂತ ನಾಟಕಕಾರ, ಕವಿ. ಅಮ್ಮ ಸಮಾಜಸೇವೆಯಲ್ಲಿ ತೊಡಗಿಕೊಂಡಿದ್ದವರು. ಖ್ಯಾತ ಸಿನಿಮಾ ನಿರ್ದೇಶಕ ಋತ್ವಿಕ್ ಘಟಕ್ ಕೂಡ ಈ ಕುಟುಂಬದ ಸದಸ್ಯರೇ.

ಮನಿಷ್ ಅವರ ಮನೆಯಲ್ಲಿ ಸದಾ ಸಾಹಿತ್ಯ ಉತ್ಸವದ ವಾತಾವರಣ ಇರುತ್ತಿತ್ತು. ಅವರ ಬಳಿ ನೊಬೆಲ್ ಪ್ರಶಸ್ತಿ ವಿಜೇತ ಲೇಖಕರ ಪುಸ್ತಕಗಳ ಸಂಗ್ರಹವಿತ್ತು. ಮನೆಯಲ್ಲಿನ ಸಾಹಿತ್ಯಿಕ ಚರ್ಚೆ ಹಾಗೂ ಅಪರೂಪದ ಪುಸ್ತಕಗಳ ಸಂಗ್ರಹ ಬಾಲಕಿ ಮಹಾಶ್ವೇತಾ ಅವರ ಮೇಲೆ ಪ್ರಭಾವ ಬೀರಿದವು. ಸಾಹಿತ್ಯ–ಸಂಸ್ಕೃತಿ ಪ್ರೀತಿಯನ್ನು ಮತ್ತಷ್ಟು ಹೆಚ್ಚಿಸಿದ್ದು ಶಾಂತಿನಿಕೇತನ. ರವೀಂದ್ರನಾಥ ಟ್ಯಾಗೋರರ ಶಾಂತಿನಿಕೇತನದಲ್ಲಿನ ಶಿಕ್ಷಣ ಮಹಾಶ್ವೇತಾ ಅವರ ವ್ಯಕ್ತಿತ್ವಕ್ಕೊಂದು ಹೊಸ ಕಾಂತಿ ತಂದುಕೊಟ್ಟಿತು. ಆದಾಯ ತೆರಿಗೆ ಇಲಾಖೆಯಲ್ಲಿ ಅಧಿಕಾರಿಯಾಗಿದ್ದ ಮನಿಷ್ ಅವರಿಗೆ ಪದೇ ಪದೇ ವರ್ಗವಾಗುತ್ತಿತ್ತು. ಈ ಅಸ್ಥಿರತೆಯಿಂದ ಶಿಕ್ಷಣಕ್ಕೆ ತೊಂದರೆ ಆಗಬಾರದೆಂದು, ಅವರು ಮಗಳನ್ನು ಶಾಂತಿನಿಕೇತನಕ್ಕೆ ಕಳಿಸಿದರು. ಶಾಂತಿನಿಕೇತನದಲ್ಲಿ ಮಹಾಶ್ವೇತಾ ದೇವಿ ಅವರಿಗೆ ಬದುಕು ತುಂಬಾ ಸುಂದರ ಎನ್ನಿಸಿತು ಹಾಗೂ ಅಲ್ಲಿನ ಅನುಭವಗಳು ಸೌಂದರ್ಯಮೀಮಾಂಸೆಯ ದೃಷ್ಟಿಯಿಂದ ಅಷ್ಟೇನೂ ಆಕರ್ಷಕವಲ್ಲದ ಮುಂದಿನ ಬದುಕನ್ನು ಎದುರಿಸಲು ಬೇಕಾದ ಜೀವನದ್ರವ್ಯವನ್ನೂ ಒದಗಿಸಿಕೊಟ್ಟವು.

ತವರಿನಲ್ಲಿ ಮಹಾಶ್ವೇತಾ ರಾಜಕುಮಾರಿಯಂತೇನೂ ಬೆಳೆಯದಿರಲಿಲ್ಲ. ಸಂಪಾದನೆ ಆಹಾ ಎನ್ನುವಂತೆ ಇಲ್ಲದಿದ್ದರೂ ಮನಿಷ್ ಅವರು ತಮ್ಮ ಮಕ್ಕಳನ್ನು ಬಡತನ–ಹಸಿವೆಯ ಝಳ ತಾಕದಂತೆ ಬೆಳೆಸಿದ್ದರು. ಇತರೆ ಹುಡುಗಿಯರಿಗೆ ಇಲ್ಲದ ಸ್ವಾತಂತ್ರ್ಯವನ್ನು ತಮ್ಮ ಹೆಣ್ಣುಮಕ್ಕಳಿಗೆ ನೀಡಿದ್ದರು. ಇಂಥ ಮುಕ್ತ–ನಿರ್ಭೀತ ಹಾಗೂ ಚಿಂತನಶೀಲ ವಾತಾವರಣದಲ್ಲಿ ಬೆಳೆದ ಮಹಾಶ್ವೇತಾ ಅವರು ಬಡತನದ ರುಚಿ ಕಂಡಿದ್ದು ಮದುವೆಯ ನಂತರ.

1947ರಲ್ಲಿ ಬಿಜೊನ್ ಭಟ್ಟಾಚಾರ್ಯ ಎನ್ನುವ ನಾಟಕಕಾರನೊಂದಿಗೆ ಮಹಾಶ್ವೇತಾ ಅವರಿಗೆ ಮದುವೆಯಾಯಿತು. ಅಲ್ಲಿಯವರೆಗೆ ಮಹಾಶ್ವೇತಾ ಹಣಕಾಸಿನ ಮುಗ್ಗಟ್ಟು ಎದುರಿಸಿರಲಿಲ್ಲ. ಬಿಜೊನ್ ಅವರನ್ನು ಮದುವೆಯಾದ ನಂತರ ಅವರು ಬದುಕಿನ ಮತ್ತೊಂದು ಮಗ್ಗುಲನ್ನು ಕಾಣಬೇಕಾಯಿತು. ಬಿಜೊನ್ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರಾಗಿದ್ದರು.